ಸಮಾಜವಾದಿ ಸಿದ್ಧಾಂತವನ್ನು ರೂಢಿಸಿಕೊಂಡಿರತಕ್ಕಂಥವರು ಈ ಸದನಕ್ಕೆ ಬಂದಿದ್ದಾರೆ. ಈ ಒಂದು ಸಮಾಜವಾದಿ ಸಿದ್ಧಾಂತದ ಬಗ್ಗೆ ಅಪಾರವಾದಂಥ ಅನುಭವವುಳ್ಳಂಥವರು, ಒಂದು ಕಾಲದಲ್ಲಿ ಸಮಾಜವಾದಿ ಚಳುವಳಿಯ ದೊಡ್ಡ ಹಿರಿಯ ಮುಖಂಡರಾಗಿದ್ದಂಥ ಶಾಂತವೇರಿ ಗೋಪಾಲಗೌಡರವರು ಮೈಸೂರಿನ ರಾಜರ ವಿರುದ್ಧ, ಅರಮನೆಯ ಅರಸೊತ್ತಿಗೆಯ ವಿರುದ್ಧ ಜಂಬೂಸವಾರಿಯ ವಿರುದ್ಧ ರಾಜಮನೆತನದ ವಿರುದ್ಧ ಕಪ್ಪುಬಾವುಟವನ್ನು ಪ್ರದರ್ಶನ ಮಾಡಿ ಮೈಸೂರಿನಲ್ಲಿ ಬಂಧನವಾಗಿರತಕ್ಕಂಥಾದ್ದು ಎಷ್ಟೋ ಭಾರಿ.....

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಉಪಸ್ಥಿತರಿದ್ದಾರೆ. ರೈಲ್ವೆ ಅಪಘಾತದ ವಿವರಗಳೆಲ್ಲಾ ಅವರ ಕಡೆಯಲ್ಲಿ ಇದ್ದಾವೆ. ಅವರು ಸದನಕ್ಕೆ ತಿಳಿಸಿದ ನಂತರ ತಾವುಗಳು ಭಾಷಣವನ್ನು ಮುಂದುವರಿಸಬಹುದು.

ಮಂತ್ರಿಗಳ ಹೇಳಿಕೆ

1. ಉದ್ಯಾನ ಎಕಸ್ಪ್ರೆಸ್ ರೈಲು ಅಪಘಾತವಾಗಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಬೆಳಿಗ್ಗೆ 7-10 ಗಂಟೆಯ ನಂತರ, 7-15ರ ಒಳಗಡೆ ಬೊಂಬಾಯಿ ಮತ್ತು ಬೆಂಗಳೂರಿನ ಮಧ್ಯೆ ಓಡಾಡತಕ್ಕಂಥ ಉದ್ಯಾನ್ ಎಕಸ್ಪ್ರೆಸ್ ರೈಲಿಗೆ ಅಪಘಾತವಾಗಿ ಬೆಂಗಳೂರಿನ ಯಲಹಂಕದ ಸಮೀಪದಲ್ಲಿ ಈಗಾಲೇ ಏಳು ಜನರು ಸಾವನ್ನಪ್ಪಿರತಕ್ಕಂಥ ವಿಷಾದದ ಸಂಗತಿಯನ್ನು ಈ ಸದನಕ್ಕೆ ತಿಳಿಸಲು ದುಃಖಪಡುತ್ತೇನೆ. ಈ ಆಕಸ್ಮಿಕ ಅಪಘಾತದಲ್ಲಿ ಸುಮಾರು 65 ಜನರಿಗೆ ತೀವ್ರತರವಾದ ಗಾಯಗಳು ಆಗಿದ್ದು ಅವರಲ್ಲಿ 17 ಜನರ ಸ್ಥಿತಿಯು ತುಂಬಾ ಚಿಂತಾಜನಕವಾಗಿದೆ. ಈ ಸುದ್ದಿ ತಿಳಿದ ತತ್‌ಕ್ಷಣ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ದೇವೇಗೌಡರು ಸ್ಥಳಕ್ಕೆ ಭೇಟಿಕೊಟ್ಟು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ನಾನು ಗೃಹಸಚಿವನಾಗಿ ಮತ್ತು ಸಹಕಾರ ಮಂತ್ರಿಗಳಾದ ಎಸ್.ಎಸ್. ಪಾಟೀಲ್ರವರು ಮತ್ತು ಆರೋಗ್ಯ ಸಚಿವರಾದ ಡಾ ಮಹದೇವಪ್ಪರವರು ಕೂಡ ಭೇಟಿಯನ್ನು ಕೊಟ್ಟಿದ್ದಾರೆ. ಸದರನ್ ರೈಲ್ವೆಯ ಜನರಲ್ ಮ್ಯಾನೇಜರ್ರವರಾದ ಮಾನ್ಯ ಅಗ್ನಿಹೋತ್ರಿಯವರು, ಪೋಲೀಸ್ ಇಲಾಖಾ ಮುಖ್ಯಸ್ಥರಾದ ರಾಮಲಿಂಗಂರವರು, ಬೆಂಗಳೂರು ನಗರದ ಪೋಲೀಸ್ ಕಮಿಶನರ್ ಮಾನ್ಯ ಶ್ರೀನಿವಾಸಲುರವರು, ಮತ್ತಿತರ ಅಧಿಕಾರಿಗಳು ರೆಸ್ಕ್ಯೂ ಅಪರೇಷನ್ನು ಸೂಪರ್ವೈಸ್ ಮಾಡುತ್ತಾ ಇದ್ದಾರೆ. ಈಗಾಗಲೇ 65 ಜನರನ್ನು ನಗರದ ವಿವಿಧ ಆಸ್ಪತ್ರೆಗಳಿಗೆ ಸೇರಿಸಿ ಅವರಿಗೆ ಬೇಕಾಗಿರತಕ್ಕಂಥ ಚಿಕಿತ್ಸೆಯನ್ನು ಕೊಡಲಿಕ್ಕೆ ಸೂಕ್ತವಾದ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ಈ ಅಪಘಾತ ಹೇಗೆ ಆಯಿತು ಎಂದು ತಿಳಿದುಕೊಳ್ಳುವ ದೃಷ್ಟಿಯಿಂದಾಗಿ ರೈಲ್ವೆ ಸೇಫ್ಟಿಕಮಿಷನ್‌ನ ಕಮಿಷನ್ರವರಾದ ಶ್ರೀ ರಾಮಮೋಹನ್ರವರು ಸ್ಥಳಕ್ಕೆ ಭೇಟಿ ಕೊಟ್ಟು ಏಕೆ ಈ ಅಪಘಾತವಾಯಿತು ಎಂಬ ಬಗ್ಗೆ ವಿಚಾರಣೆಯನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಪೋಲೀಸ್ ಇಲಾಖೆಯವರು, ಆರೋಗ್ಯ ಇಲಾಖೆಯವರು, ಮತ್ತು ಇತರ ನಮ್ಮ ಸಂಬಂಧಪಟ್ಟ ವಿವಿಧ ಇಲಾಖಾ ಅಧಿಕಾರಿಗಳು ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಯವರ ಸೂಚನೆಯಂತೆ ರೆಸ್ಕ್ಯೂ ಅಪರೇಷನ್ಗೆ ಎಲ್ಲರೂ ಅಲ್ಲಿದ್ದಾರೆ. ನಮ್ಮ ಸರಕಾರದ ನಿಯೋಜಿತ ಮುಖ್ಯ ಕಾರ್ಯದರ್ಶಿಗಳು ಕೂಡ ಅಲ್ಲಿಯೇ ಇದ್ದು, ಅಲ್ಲಿನ ಪರಿಸ್ಥಿತಿಯನ್ನು ನಿಭಾಯಿಸಲು ತಮ್ಮ ಎಲ್ಲಾ ಪ್ರಯತ್ನಗಳನ್ನು ಸಹಿತ ಮಾಡುತ್ತಾ ಇದ್ದಾರೆ.

ಬಿಎಸ್ಎಫ್, ಸಿಆರ್ಪಿಎಫ್ ಮತ್ತು ಇತರ ಕೇಂದ್ರ ಸರಕಾರದ ಸಿಬ್ಬಂದಿ ವರ್ಗದವರೂ ಕೂಡ ಸಹಕಾರವನ್ನು ಕೊಟ್ಟಿದ್ದಾರೆ. ಯಲಹಂಕ ಮತ್ತು ಸುತ್ತುಮುತ್ತಲಿನ

ರೈತರು, ಹಳ್ಳಿಯವರು ಬಂದು ಅಲ್ಲಿಯ ರೆಸ್ಕ್ಯೂ ಆಪರೇಷನ್ಸ್ಗೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಈ ಘಟನೆ ಹೇಗೆ ಆಯಿತು ಎಂಬ ಬಗ್ಗೆ ವಿಚಾರಣೆಯು ನಡೆಯುತ್ತಾ ಇದೆ. ಅಪಘಾತದಲ್ಲಿ ಯಾರಿಗೆ ನೋವು ಉಂಟಾಗಿದೆ ಅವರಿಗೆ ಬೇಕಾದಂಥ ಎಲ್ಲಾ ನೆರವನ್ನು ಕೊಡಲು ವ್ಯವಸ್ಥೆಯನ್ನು ಮಾಡಲು ಮಾನ್ಯ ಮುಖ್ಯಮಂತ್ರಿಯವರು ಆದೇಶವನ್ನು ಕೊಟ್ಟಿದ್ದಾರೆ. ಮತ್ತು ಬೊಂಬಾಯಿ ಮತ್ತು ಇತರ ಕಡೆಗಳಿಂದ ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರನ್ನು ಅವರವರ ಊರುಗಳಿಗೆ ಸಾಗಿಸಲು ಬಿಟಿಎಸ್ ಮತ್ತು ಕೆಎಸ್ಆರ್ಟಿಸಿ ವಾಹನಗಳ ಮೂಲಕ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ನಾನು ತಿಳಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿದ್ದಾರೆ ಮೃತರ ಕುಟುಂಬವರ್ಗಕ್ಕೆ ಪರಿಹಾರವನ್ನು ಮತ್ತು ಗಾಯಾಳುಗಳಿಗೆ ಪರಿಹಾರವನ್ನು ಅವರು ಘೋಷಣೆ ಮಾಡುತ್ತಾರೆ. ಈ ಅತ್ಯಂತ ವಿಷಾದದ ಸಂಗತಿಯನ್ನು ಈ ಸದನಕ್ಕೆ ತಿಳಿಸಲಿಕ್ಕೆ ನಾನು ಬಹಳ ದುಃಖಪಡುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದೊಂದು ಅತ್ಯಂತ ತೀವ್ರತರವಾದ ದುರ್ಘಟನೆ. ಬಹುಶಃ ಈಗ ಸತ್ತವರ ಸಂಖ್ಯೆ ಏರಿರಬಹುದು ಅಥವಾ ಇನ್ನು ಮುಂದೆ ಜಾಸ್ತಿ ಆಗಬಹುದು. ಆದರೆ ಅಲ್ಲಿ ಸ್ಥಳಕ್ಕೆ ಹೋಗಿ ನೋಡಿದರೆ ಇಂತಹ ತೀವ್ರತರವಾದ ದುರಂತ ಹಿಂದೆ ಎಂದೂ ನಡೆದಿರಲಿಲ್ಲ ಎಂದು ಭಾವಿಸಿಕೊಳ್ಳುತ್ತೇನೆ. ಆ ಬೋಗಿಗಳೆಲ್ಲ ಮೂರುನಾಲ್ಕು ಪಟ್ಟು ಉರುಳಿ ಬಿದ್ದಿರುವ ಸನ್ನಿವೇಶ. ಕೆಲವು ಬೋಗಿಗಳು ನುಚ್ಚುನುರಾಗಿವೆ, ಬಹಳ ತೀವ್ರತರವಾದ ಆಘಾತವಾಗಿದೆ. ಇದಕ್ಕೆ ಕಾರಣ ಈಗ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ, ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಮೃತರ ಕುಟುಂಬಕ್ಕೆ ಪರಿಹಾರವನ್ನು ರೈಲ್ವೆ ಇಲಾಖೆಯವರು ಕೊಡುತ್ತಾರೆ. ಈಗ ತಾತ್ಕಾಲಿಕವಾಗಿ ಅವರಿಗೆ 5 ಸಾವಿರ ಕೊಡುತ್ತೇವೆಂದು ಹೇಳಿದ್ದೇನೆ. ಮುಂದೆ ಕೆಲವೆಲ್ಲಾ ಕ್ರಮವನ್ನು ಜರುಗಿಸಿದ ಮೇಲೆ ಅವರು ಅಂತಿಮ ನಿರ್ಣಯ ಮಾಡುತ್ತಾರೆ. ಪ್ರತಿಯೊಂದು ಕುಟುಂಬಕ್ಕೂ ಎಷ್ಟೆಷ್ಟು ಕೊಡಬೇಕು ಎಂದು. ಈಗ ಮಾನವೀಯತೆ ದೃಷ್ಟಿಯಿಂದ ಸತ್ತವರ ಕುಟುಂಬದವರಿಗೆ 10 ಸಾವಿರ ರೂ.ಗಳನ್ನು ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಕೊಡಲು ನಿರ್ಣಯ ಮಾಡಿದ್ದೇನೆ. ಅದರ ಜೊತೆಗೆ ಆಸ್ಪತ್ರೆಯಲ್ಲಿ ತೀವ್ರತರವಾದ ಗಾಯಗಳಾಗಿರುವವರಿಗೆ ಕನಿಷ್ಠ 1 ಸಾವಿರ ರೂ. ಸಾಮಾನ್ಯ ಒಂದು ದಿನ ಎರಡು ದಿನ ಚಿಕಿತ್ಸೆ ಪಡೆದು ಮನೆಗೆ ಹೋಗುವ ಪ್ರತಿಯೊಬ್ಬರಿಗೆ 500 ರೂ. ಕೊಡುವ ಬಗ್ಗೆ ಈಗ ಸರ್ಕಾರದ ವತಿಯಿಂದ ಪ್ರಕಟ ಮಾಡಲು ಇಚ್ಛಿಪಡುತ್ತೇನೆ. ಪಕ್ಕದ ಜಕ್ಕೂರು ಮತ್ತು ಬೇರೆ ಹಳ್ಳಿಯವರು ರೆಸ್ಕ್ಯೂ ಆಪರೇಶನ್ನಲ್ಲಿ ಬಹಳ ಸಹಕಾರ ಕೊಟ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರಿಗೆಲ್ಲಾ ನನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ನಮ್ಮ ಆರೋಗ್ಯ ಇಲಾಖೆ ಮತ್ತು ಖಾಸಗೀ ಕೆಲವು ನರ್ಸಿಂಗ್ ಹೋಂಗಳು ಅಲ್ಲಿಗೆ ಸಕಾಲಕ್ಕೆ ಹೋಗಿ ಎಲ್ಲಾ ರೀತಿಯ ಪ್ರಯತ್ನ ಮಾಡಿದ್ದಾರೆ. ಅತಿ ಶೀಘ್ರವಾಗಿ ಯಾರು ಪ್ರಾಣವನ್ನು ಉಳಿಸಿಕೊಳ್ಳಲು ಸೆಣಸಾಡತ್ತಿದ್ದಾರೆ. ಅವರನ್ನೆಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ. ಬೋಗಿ ಕೆಳಗಡೆ ಇನ್ನೂ ಎರಡು ಮೂರು ಜನ ಇದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನೆಲ್ಲಾ ಕಟ್ ಮಾಡಿ ತೆಗೆಯಬೇಕು. ಈ ಎಲ್ಲಾ ಕೆಲಸವನ್ನು ವಿವಿಧ ಇಲಾಖೆಗಳ ಸಹಕಾರದಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆಲ್ಲಾ ಸರ್ಕಾರ ಮೆಚ್ಚುಗೆ ವ್ಯಕ್ತಪಡಿಸುತ್ತದೆ. ಬಹುಶಃ ಸತ್ತವರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರ ಕುಟುಂಬವರ್ಗದವರ ದುಃಖವನ್ನು ಇವತ್ತು ನಾವು ಸಾಂತ್ವನದ

ಮುಖೇನ ಹೇಳಿ ಕಡಿಮೆ ಮಾಡುವುದು ಕಷ್ಟ. ದೇವರು ಅವರಿಗೆ ಆ ಶಕ್ತಿ ಕೊಡಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಪರಿಸ್ಥಿತಿ ಬಗ್ಗೆ ಅಧ್ಯಯನ ಮಾಡಿ ತಕ್ಷಣದ ವರದಿಯನ್ನು ಸದನಕ್ಕೆ ಒದಗಿಸಿದ್ದಾರೆ. ಪರಿಹಾರದ ಮೊತ್ತವನ್ನು ಸ್ವಲ್ಪ ಜಾಸ್ತಿ ಮಾಡಿದರೆ ಒಳ್ಳೆಯದು ಅವರಿಗೆ ಮೊದಲನೆಯದಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ : ಅವರಿಗೆ ಎರಡು ಲಕ್ಷ ರೂ. ವರೆಗೆ ಕೊಡುವ ಸಾಧ್ಯತೆ ಇದೆಯೆಂದು ಅಧಿಕಾರಿಗಳು ಹೇಳಿದ್ದಾರೆ. ಇವತ್ತು ಅವರ ಬಾಡಿ ಶಿಫ್ಟ್ ಮಾಡಲು 5ಸಾವಿರ ಕೊಡುತ್ತೇವೆ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದಾದರೂ ಸಹ ಮಾನವೀಯತೆ ದೃಷ್ಟಿಯಿಂದ ಇದನ್ನು ಘೋಷಣೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಕೃತ್ಯದ ಹಿಂದೆ ಯಾವುದಾದರೂ ಕೆಟ್ಟ ಪರಿಣಾಮದ್ದು ಏನಾದರೂ ನಡೆದಿದೆಯೇ ಎಂಬ ಬಗ್ಗೆ ಸಮಗ್ರವಾದ ಒಂದು ನ್ಯಾಯಾಂಗ ತನಿಖೆಯನ್ನು ರಾಜ್ಯಸರ್ಕಾರ ಮಾಡುವ ಉದ್ದೇಶ ತಮಗಿದೆಯೇ ಎಂಬುದು ಒಂದು ಮತ್ತು ಇಷ್ಟು ಪರಿಣಾಮಕಾರಿಯಾಗಿ ಇಂಥ ಅಪಘಾತಗಳು ಹಿಂದೆಯೂ ನಡೆದಿಲ್ಲ ಎಂದು ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಈ ಬಗ್ಗೆ ತನಿಖೆ ಯಾವ ಮಟ್ಟದಲ್ಲಿ ಆಗಬೇಕು, ಯಾವ ರೀತಿ ಆಗಬೇಕು ಎನ್ನುವುದನ್ನು ಒಂದು ನಿರ್ಧಾರ ಮಾಡಬೇಕು. ಮತ್ತು ತನಿಖೆ ಇದು ನಮ್ಮ ರಾಜ್ಯಸರ್ಕಾರಕ್ಕೆ ಸೇರಿದ್ದೇ ಅಥವಾ ಕೇಂದ್ರಕ್ಕೆ ಸೇರಿದ್ದೇ ಎನ್ನುವುದನ್ನು ಚಿಂತನೆ ಮಾಡಬೇಕು. ಆದರೆ ಇದನ್ನು ಕೇವಲ ಒಂದು ಅಪಘಾತ ಎನ್ನತಕ್ಕಂಥ ಪ್ರಶ್ನೆಗೆ ನಾವು ನಿಲ್ಲದೆ ಇದರ ಹಿಂದೆ ಇರತಕ್ಕಂಥ ಕೃತ್ಯ ಏನು, ಇದರ ಹಿಂದೆ ಇರತಕ್ಕಂಥ ಕೈವಾಡ ಏನು? ಅದರಲ್ಲಿ ಏನಾದರೂ ನಡೆದಿದೆಯೇ ಎನ್ನುವಂಥ ಪ್ರಶ್ನೆ ಕೂಡ ಮಾನ್ಯ ಸರ್ಕಾರ ಪರಿಣಾಮಕಾರಿಯಾಗಿ ಹೇಳಬೇಕು ಎಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ರೈಲ್ವೆ ಪೋಲೀಸ್ ಪ್ರೊಟೆಕ್ಷನ್ ವಿಂಗ್ ಇದೆ, ಹಿರಿಂiಅಧಿಕಾರಿಗಳು ಆಗಲೇ ಅಲ್ಲಿ ಬಂದಿದ್ದಾರೆ. ಸೀನಿಯರ್ ಮೋಸ್ಟ್ who is incharge ಅವರು ನಮಗೆ ಏನು ಸಹಕಾರವನ್ನು ಕೇಳಿದರೂ ಕೊಡುತ್ತೇವೆ. ಅದು ಅಷ್ಟೇ ಅಲ್ಲ, ಜ್ಯುಡಿಷಿಯಲ್ ಎನ್ಕ್ವೈರಿ ಬಗ್ಗೆ ತೀರ್ಮಾನ ಮಾಡಬೇಕಾದರೂ ಕೂಡ ಅದನ್ನು ಅವರು ತೀರ್ಮಾನ ಮಾಡಬೇಕಾಗುತ್ತದೆ. ಅದರ ಅವಶ್ಯಕತೆ ಬಿದ್ದರೆ. ಅದು ಒಂದು. ಇನ್ನೊಂದು ನಮ್ಮವರೇ ರೈಲ್ವೆ ಮಂತ್ರಿಗಳಿದ್ದಾರೆ. ಸಾಮಾನ್ಯವಾಗಿ ರೈಲ್ವೆ ಅಪಘಾತವಾದಾಗ ಮರುಕ್ಷಣದಲ್ಲೇ ಅವರು ಬರುತ್ತಾರೆ. ಅವರು ಎಷ್ಟೋ ಘಟನೆಗಳಾದಾಗ ನಾನು ನೋಡಿದ್ದೇನೆ. ಅತೀ ಜರೂರಾಗಿ ಕ್ರಮ ತೆಗೆದುಕೊಳ್ಳುವ ಸ್ವಭಾವ ಶ್ರೀಮಾನ್ ಜಾಫರ್ ಷರೀಫ್ ಇಟ್ಟುಕೊಂಡಿದ್ದಾರೆ. ಆದರೆ ಇವತ್ತು ಅವರು ಊರಿನಲ್ಲಿಲ್ಲ, ಅವರು ದೇಶದಲ್ಲಿಲ್ಲ, ಬ್ರೆಜಿಲ್‌ಗೆ ಹೋಗಿದ್ದಾರೆ. ನಮ್ಮ ಕಡೆಯಿಂದ ಮೆಸೇಜನ್ನು ಪ್ರಧಾನಮಂತ್ರಿಗಳಿಗೆ ಕಳುಹಿಸಿದ್ದೇವೆ. ಬಹುಶಃ ಅವರು ಯಾರನ್ನು ಕಳುಹಿಸುತ್ತಾರೋ ನೋಡಬೇಕು. ಅವರು ಕಳುಹಿಸುತ್ತಾರೆ. ಅದರ ಮೇಲೆ ಸರ್ಕಾರ ಏನು ನೆರವು ಕೊಡಬೇಕೋ ಆ ಎಲ್ಲಾ ನೆರವನ್ನು ಕೊಡುತ್ತೇವೆ. ಎನ್ಕ್ವೈರಿಗೆ ಏನಾದರೂ ಒಂದು ವೇಳೆ ಕೈಚಳಕವೇನಾದರೂ ಇದ್ದರೆ, ಇನ್ನೊಂದು ವಾದ ಇದೆ, ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಪೂರ್ವಬಾವಿಯಾಗಿ ನನ್ನ ಅಭಿಪ್ರಾಯವನ್ನು ಹೇಳುವುದು ಚೆನ್ನಾಗಿರುವುದಿಲ್ಲ, ತನಿಖೆಯಾಗಲಿ. ನಮ್ಮ ಅಧಿಕಾರಿಗಳಿಲ್ಲಾ ಇದ್ದಾರೆ. ಅವರ ಕಣ್ಣಿಂದ ನೋಡಿದ್ದಾರೆ, ಪ್ರತ್ಯಕ್ಷದರ್ಶಿಯಾಗಿ ನೋಡಿದ್ದಾರೆ. ಈ ಎಲ್ಲಾ ವಿಷಯಗಳನ್ನು ತನಿಖೆ ನಡೆಯುವಾಗ ಅವರ ಮುಂದೆ ಹೇಳುವುದಕ್ಕೆ ಸಹಕಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.